# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2837/2016/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11.5.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:–** ತುಮಕೂರಿನ ವಿಜಯಪುರ ಪುರಸಭೆಯ ವ್ಯಾಪ್ತಿಯಲ್ಲಿರುವ ದೂರುದಾರರ ಮನೆಗೆ ಹೊಂದಿಕೊಂಡು ಅಮಾನುಲ್ಲಾ ಅವರು ಹಾಕಿದ ತಾತ್ಕಾಲಿಕ ಷೆಡ್(ಗೋಡೌನ್)ನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ವಾಜೀದ್ ಎಸ್., ಕೂಬಾ ಮೊಹಲ್ಲಾ ವಿಜಯಪುರ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ “ದೂರುದಾರರು” ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಅಮರನಾಥ್, ಮುಖ್ಯಾಧಿಕಾರಿಗಳು, ಹಾಗೂ (2) ಶ್ರೀ ಉದಯಶಂಕರ್, ಆರೋಗ್ಯ ನಿರೀಕ್ಷಕರು, ವಿಜಯಪುರ ಪುರಸಭೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ವಿಜಯಪುರ ಪಟ್ಟಣದ ಕೂಬಾ ಮಸೀದಿ ಮೊಹಲ್ಲಾ 16ನೇ ವಾರ್ಡಿನ ಮಧ್ಯ ಭಾಗದಲ್ಲಿ ವಾಸವಾಗಿರುವ ದೂರುದಾರರ ಮನೆಗೆ ಹೊಂದಿಕೊಂಡು ಶ್ರೀ ಅಮಾನುಲ್ಲಾ ಎನ್ನುವವರು ಅನುಪಯುಕ್ತ ವಸ್ತುಗಳಾದ ಪ್ಲಾಸ್ಟಿಕ್, ಕಬ್ಬಿಣ, ಪೇಪರ್ ರಟ್ಟುಗಳು, ಕೇಬಲ್ ವೈರ್‌ಗಳು, ಪೈಪುಗಳು, ಇತ್ಯಾದಿ ವಸ್ತುಗಳನ್ನು ಸಂಗ್ರಹಿಸಲು ಪುರಸಭೆಯ ಅನುಮತಿ ಪಡೆಯದೆ ಅನಧಿಕೃತ ಷೆಡ್ಡನ್ನು ನಿರ್ಮಿಸಿರುತ್ತಾರೆ. ಈ ವಸ್ತುಗಳನ್ನು ಅಮಾನುಲ್ಲಾ ಅವರು ರಾತ್ರೋರಾತ್ರಿ ಸಾಗಿಸುತ್ತಿದ್ದು, ಆಕಸ್ಮಿಕ ಬೆಂಕಿ ತಗುಲುವ ಸಂಭವವಿರುತ್ತದೆ. ಈ ಅನಧಿಕೃತ ಷೆಡ್ ತೆರವುಗೊಳಿಸುವಂತೆ ಎದುರುದಾರರಿಗೆ ಸಾಕಷ್ಟು ಬಾರಿ ಮನವಿ ಮಾಡಿಕೊಂಡರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು, ಅನಧಿಕೃತ ಷೆಡ್ ತೆರವುಗೊಳಿಸಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಗೋಡೌನ್‌ನ ಮಾಲೀಕರಾದ ಅಮಾನುಲ್ಲಾ ಅವರಿಗೆ 16.1.12016ರಂದು, 30.12.2016ರಂದು 2 ನೋಟೀಸುಗಳನ್ನು ನೀಡಿದ್ದು, ಅವರು ಅದಕ್ಕೆ ಉತ್ತರಿಸಿ, ತಾವು ತಾತ್ಕಾಲಿಕವಾಗಿ ಷೆಡ್ ಹಾಕಿದ್ದು, ಅಕ್ಕಪಕ್ಕದವರಿಗೆ ಯಾವುದೇ ರೀತಿ ತೊಂದರೆಯಾಗುವುದಿಲ್ಲ. ಆದರೆ ದೂರುದಾರರು ಸದರಿ ನಿವೇಶನವನ್ನು ಕಬಳಿಸುವ ದುರುದ್ದೇಶದಿಂದ, ವೈಯಕ್ತಿಕ ದ್ವೇಷದಿಂದ ದೂರು ಸಲ್ಲಿಸಿರುತ್ತಾರೆ. ಸದರಿ ನಿವೇಶನವನ್ನು ಅಮಾನುಲ್ಲಾ ಅವರೇ ಖರೀದಿಸುವವರಿದ್ದು, ಅದು ನೋಂದಣಿಯಾದ ನಂತರ ತಾತ್ಕಾಲಿಕ ಷೆಡ್ ತೆರವುಗೊಳಿಸಲಾಗುತ್ತದೆಂದು ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಛರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಅಮಾನುಲ್ಲಾ ಅವರು ಹಾಕಿದ ತಾತ್ಕಾಲಿಕ ಷೆಡ್ ಅನಧಿಕೃತವಾಗಿದೆಯೆನ್ನುವುದನ್ನು ಎದುರುದಾರರು ಒಪ್ಪಿಕೊಂಡಿರುತ್ತಾರೆ. ಏಕೆಂದರೆ ದೂರುದಾರರು ದೂರು ಸಲ್ಲಿಸಿದ ನಂತರ ಅಮಾನುಲ್ಲಾ ಅವರಿಗೆ ಎದುರುದಾರರು ಷೆಡ್ ತೆರವುಗೊಳಿಸುವಂತೆ ನೋಟೀಸು ನೀಡಿರುತ್ತಾರೆ. ಆದರೆ ಅಮಾನುಲ್ಲಾ ಅವರು ನೋಟೀಸುಗಳಿಗೆ ಉತ್ತರಿಸಿ ಷೆಡ್ ತೆರವುಗೊಳಿಸುವುದಾಗಿ ಮಾತ್ರ ಹೇಳಿದ್ದು, ಆದರೆ ತೆರವುಗೊಳಿಸಿಲ್ಲವೆಂದು ಕಂಡುಬರುತ್ತದೆ.

6. ಈ ಅನುಪಯುಕ್ತ ವಸ್ತುಗಳನ್ನು ಸಂಗ್ರಹಿಸಲು ಹಾಕಿದ ಷೆಡ್ ನಿಂದ ದೂರುದಾರರಿಗೆ ಹಾಗೂ ಇತರ ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ ಹಾಗೂ ಈ ಷೆಡ್ ಅನಧಿಕೃತವಾಗಿರುವುದರಿಂದ ಅದನ್ನು ತಕ್ಷಣವೇ ತೆರವುಗೊಳಿಸಲು 1 ಮತ್ತು 2ನೇ ಎದುರುದಾರರು ಯಾವುದೇ ಪರಿಣಾಮಕಾರಿ ಕ್ರಮಕೈಗೊಂಡಿರುವುದಿಲ್ಲ. ಕೇವಲ ನೋಟೀಸು ನೀಡುತ್ತಾ ಕಾಲಹರಣ ಮಾಡಿ ಸಾರ್ವಜನಿಕರಿಗೆ ಪರಿಹಾರ ದೊರಕಿಸಿಕೊಡುವಲ್ಲಿ ಎದುರುದಾರರು ವಿಫಲರಾಗಿದ್ದಾರೆಂದು ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರ ಮನೆಗೆ ಹೊಂದಿಕೊಂಡು ಅಮಾನುಲ್ಲಾ ಅವರು ಹಾಕಿದ ತಾತ್ಕಾಲಿಕ ಷೆಡ್(ಗೋಡೌನ್)ನ್ನು ತೆರವುಗೊಳಿಸಲು **ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/-

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.